ಗಮನ ಸೆಳೆಯುವ ಸೂಚನೆ

ಶ್ರೀ ಬಿ. ಲಕ್ಕಪ್ಪ — ಅವರು ಸಭೆಯಲ್ಲಿ ಹಾಜರಿರಲಿಲ್ಲ.

ಮಂಟಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎ ಎನ್.ಎಂ. ಆಗಿದ್ದ ಕೆ.ಬಿ, ಭಾಗೀರತಿ ಅವರ ಸಾವಿನ ಬಗ್ಗೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್.— ಬಸವಕಲ್ಯಾಣ ತಾಲ್ಲೂಕಿನ ಮಂಟಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎ.ಎನ್.ಎಂ. ಆಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ಕೆ.ಬಿ. ಭಾಗೀರತಿ ಎಂಬುವರ ಸಾವಿನ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಈ ಸಾವು ಹೇಗೆ ಆಯಿತು ಎಂಬುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಹೇಳಬೇಕು. ಆ ಬಗ್ಗೆ ಅವರು ಹೇಳಿಕೆಯನ್ನು ತಯಾರು ಮಾಡಿ ಇಟ್ಟುಕೊಂಡಿದ್ದಾರೆಂದು ನನಗನ್ನಿಸುತ್ತದೆ.

ಶ್ರೀ ಬಿ. ರಾಚಯ್ಯ.— ಅದು ಇನ್ನೂ ತಯಾರಾಗಿಲ್ಲ. ನಾಳೆ ಅದರ ಬಗ್ಗೆ ಉತ್ತರವನ್ನು ಓದಿಗಿಸಿಕೊಡುತ್ತೇನೆ.

ಅಧ್ಯಕ್ಷರು.— ನಿಮಗೆ ಸಮಯ ಬೇಕೇ.

ಶ್ರೀ ಆರ್.ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೆ, ಅದರ ಅವಶ್ಯಕತೆ ಇಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರು ನನಗೊಂದು ಪತ್ರ ಬರೆದು ಇದನ್ನು ಸಿ.ಓ.ಡಿ. ಗೆ ರೆಫರ್ ಮಾಡಬೇಕು. ಪ್ರಾಪರ್ ಇನ್ವೆಸ್ಟಿಗೇಷನ್ ಆಗಬೇಕೆಂದು ಕೇಳಿಕೊಂಡಿದ್ದಾರೆ. ಅದನ್ನು ನಾನು ಈಗಾಗಲೇ ಸಿ.ಓ.ಡಿ.ಗೆ ರೆಫರ್ ಮಾಡಿದ್ದೇನೆ.

ಶ್ರೀ ಬಿ. ರಾಚಯ್ಯ.— ಒಳ್ಳೆಯ ಕೆಲಸ ಮಾಡಿದ್ದೀರಿ.

ಶ್ರೀ ವೇದಾಂತ ಹೆಬ್ಬಾರ್.— ಮಾನ್ಯ ಅಧ್ಯಕ್ಷರೆ, ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಕಳೆದ ಐದು ವರ್ಷಗಳಿಂದ ನಷ್ಟವಾಗುತ್ತಿರುವ ಬಗ್ಗೆ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಹಾಗೂ ವಿದ್ಯುತ್ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ.— ಇದನ್ನು ನಂತರ ತೆಗೆದುಕೊಳ್ಳಿ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು.— ನಂತರ ಇದನ್ನು ತೆಗೆದುಕೊಳ್ಳಲಾಗುವುದು.

ನಿಯಂಮ ೩೩೪ರ ವೇರೆಗೆ

ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ ಅವರು ಸಭೆಯಲ್ಲಿ ಹಾಜರಿರಲಿಲ್ಲ.

ಶ್ರೀ ಕೆ. ಜಿ. ರಾಮಸ್ವಾಮಿ ಅವರು ಸಭೆಯಲ್ಲಿ ಹಾಜರಿರಲಿಲ್ಲ.

1 ತರೀಕೆರೆ ತಾಲ್ಲೂಕಿನ ಬೆಟ್ಟದ ಹಳ್ಳಿ ಬಸವನ ಹಳ್ಳಿ ಕೆರೆ ನಿರ್ಮಾಣದ ಬಗ್ಗೆ.

ಶ್ರೀ ಬಿ.ಆರ್. ನೀಲಕಂಠಪ್ಪ.— ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು, ಬೆಟ್ಟದಹಳ್ಳಿ ಬಸವನಹಳ್ಳಿ ಕೆರೆ ನಿರ್ಮಾಣಕ್ಕಾಗಿ ೧೯೮೭-೮೮ನೇ ಸಾಲಿನಲ್ಲಿ ಸುಮಾರು ೧೪ ಲಕ್ಷ ರೂ. ಗಳನ್ನು ಕರ್ನಾಟಕ ಸರ್ಕಾರದ ಆಯುವ್ಯಯದಲ್ಲಿ ಸೇರಿಸಿ ಈಗ ಈ ಕೆರೆ ನಿರ್ಮಾಣವನ್ನು ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಿದ್ದಾರೆ. ಕಾರಣ ತಿಳಿಸಿ. ಮತ್ತು ಕೇವಲ ಕೆರೆ ನಿರ್ಮಾಣದ ಕಾರ್ಯವನ್ನು ಮಾತ್ರ ವರ್ಗಾಯಿಸಿ ಆಯವ್ಯಯದಲ್ಲಿ ಮಂಜೂರಾದ ಹಣವನ್ನು ವರ್ಗಾಯಿಸದೆ ಇರುವುದರಿಂದ ಈ ಕೆರೆ ನಿರ್ಮಾಣ ಸ್ಥಗಿತಗೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಆದ್ದರಿಂದ ದಯಮಾಡಿ ಕೆಲಸದ ವರ್ಗಾವಣೆಯೊಂದಿಗೆ ಹಣದ ವರ್ಗಾವಣೆಯನ್ನೂ ಮಾಡಿದ್ದೀರಾ? ಅಥವಾ ಈ ಕಾರ್ಯ

ಪನ್ನು ಕೈ ಬಿಡುವಿರಾ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ.— ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಂ ಆ ಮನೆಯಲ್ಲಿದ್ದಾರೆ. ಈ ಬಗ್ಗೆ ಅವರಿಗೆ ಉತ್ತರವನ್ನು ತರಿಸಿಕೊಡುತ್ತೇವೆ.

ಶ್ರೀ ಬಿ. ನಾರಾಯಣಸ್ವಾಮಿ ಅವರು ಸಭೆಯಲ್ಲಿ ಹಾಜರಿರಲಿಲ್ಲ.

ಶ್ರೀ ಎ.ಎಂ. ಹಿಂಡಸ್‌ಗೇರಿ ಅವರು ಸಭೆಯಲ್ಲಿ ಹಾಜರಿರಲಿಲ್ಲ.

ಶ್ರೀ ಎನ್.ಎಂ. ಅಡ್ಕಂತಾಯ ಅವರು ಸಭೆಯಲ್ಲಿ ಹಾಜರಿರಲಿಲ್ಲ.

ಶ್ರೀ ಹೆಚ್.ಬಿ. ದ್ಯಾವರೆಪ್ಪ ಅವರು ಸಭೆಯಲ್ಲಿ ಹಾಜರಿರಲಿಲ್ಲ,

ಶ್ರೀ ಆರ್. ವೆಂಕಟರಾಘಯ್ಯ ಅವರು ಸಭೆಯಲ್ಲಿ ಹಾಜರಿರಲಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿದ್ಯಾರ್ಥಿಗಳು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿರುವುದು.

ಶ್ರೀ ಪೀಠದ ಹೆಬ್ಬಿಗೆ.— ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿದ್ಯಾರ್ಥಿಗಳು ಕಳೆದ ಒಂದು ವಾರದಿಂದ ಸರ್ಕಾರದ ಮುಂದೆ ಹಲವು ಬೇಡಿಕೆಗಳನ್ನು ಮಂಡಿಸಿ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಗರಂಭಿಸಿದ್ದಾರೆ, ಕೂಡಲೇ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಪರವಾಗಿ ಮಂತ್ರಿಗಳೊಬ್ಬರನ್ನು ಸಂಧಾನಕ್ಕೆ ಕಳುಹಿಸಿ ವಿದ್ಯಾರ್ಥಿ ಮುಖಂಡರ ಜೊತೆ ಮಾತುಕತೆ ನಡೆಸಿ ಈ ಸಮಸ್ಯೆಯನ್ನು ಬಗೆಹರಿಸಿ ಶಾಂತಿ ವಾತಾವರಣ ಮೂಡಲು ಅವಕಾಶ ಕಲ್ಪಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ — ಇದಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಈಗಾಗಲೇ ನಮ್ಮ ಆರೋಗ್ಯ ಸಚಿವರು ಸಂಬಂಧಪಟ್ಟ ವಿದ್ಯಾರ್ಥಿ ಮುಖಂಡರುಗಳನ್ನು ಭೇಟಿಯಾಗಿದ್ದಾರೆ. ಅವರನ್ನು ಭೇಟಿಯಾಗಿ ಸಂಧಾನ ರೂಪದಲ್ಲಿ ಅವರ ಜೊತೆ ಮಾತುಕತೆ ಕೂಡ ನಡೆಸಿದ್ದಾರೆ. ಆದರೆ ಅವರು ಇಟ್ಟಿರುವ ಬೇಡಿಕೆಗಳು ಅಪ್ರೊಂದಾ ಸಮಂಜಸವಾದವುಗಳಲ್ಲ. ಕಷ್ಟಕರವಾದ ಬೇಡಿಕೆಗಳನ್ನು ಇಟ್ಟು ಅದನ್ನು ಸಾಧಿಸಬೇಕೆಂಬ ಉದ್ದೇಶದಿಂದ ಸರ್ಕಾರದ ಮೇಲೆ ಒತ್ತಾಯವನ್ನು ತರುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೆ ತಮ್ಮ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಂಡು ಒಳ್ಳೆಯ ಮುಗ್ಧ ವಾತಾವರಣದಲ್ಲಿ ಯಾವ ರೀತಿ ಬೇಕಾದರೂ ಮುಂದೆ ಚರ್ಚೆ ಮಾಡಬಹುದು. ಆದಕ್ಕೆ ಸರ್ಕಾರದ ಅಡ್ಡಿ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ ರಾಚಯ್ಯ — ಮಾನ್ಯ ಅಧ್ಯಕ್ಷರೆ, ಇದೂ ಅಲ್ಲದೆ ನಾನು ಅವರ ಜೊತೆ ಚರ್ಚೆ ಮಾಡಿ ಆ ಬಗ್ಗೆ ಮುಖ್ಯಮಂತ್ರಿಗಳಿಗೆ ವರದಿಯನ್ನೂ ಕೂಡ ಕೊಟ್ಟಿದ್ದೇನೆ. ನಾನು ಆ ವಿದ್ಯಾರ್ಥಿ ಮುಖಂಡರವರನ್ನು ಭೇಟಿಯಾದಾಗ ಸನ್ಮಾನ್ಯ ಸದಸ್ಯರಾದ ಚಿಕ್ಕಬೋರಯ್ಯನವರೂ ಕೂಡ ನನ್ನ ಜೊತೆಯಲ್ಲಿದ್ದರು. ನಾನು ಅವರನ್ನು ಭೇಟಿಯಾಗಿ ವಿಷಯ ಏನೆಂಬುದನ್ನು ತಿಳಿದುಕೊಂಡಿದ್ದೇನೆ. ಮೊದಲು ಅವರು ಏನು ಹೇಳಿದರು ಎಂದರೆ, ೫೮ ರಿಂದ ೬೦ ವರ್ಷದವರಿಗೆ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ಹೆಚ್ಚಿಸುತ್ತಾರೆಂದು ಅವರ ಮನಸ್ಸಿನಲ್ಲಿತ್ತು. ಅದನ್ನು ಪ್ರಚಾರ ಕೂಡ ಮಾಡಿದ್ದರಂ. ೫೮ ರಿಂದ ೬೦ಕ್ಕೆ ಏರಿಸತಕ್ಕ ವಿಷಯವಾಗಲಿ ಆ ಬಗ್ಗೆ ಪ್ರಶ್ನೆಯಾಗಲಿ ಪ್ರಸ್ತಾಪಕ್ಕೇ ಬಂದಿಲ್ಲವೆಂದು ನಾನೂ ಕೂಡ ಅವರಿಗೆ ತಿಳಿಸಿದ್ದೇನೆ.. ಬಂದಿಲ್ಲ. ಆದಕ್ಕೆ ಅವಕಾಶವನ್ನೂ ಕೂಡ ಕೊಡುವುದಿಲ್ಲವೆಂದೂ ಅವರಿಗೆ ತಿಳಿಸಿದ್ದೇನೆ. ಮತ್ತೆ ೫೮ ರಿಂದ ೫೯ಕ್ಕಾದರೂ ಇಳಿಸಿ ಎಂಬುದಾಗಿ ಅವರು ಕೇಳಿದರು. ಸಿಕ್ಕಿರತಕ್ಕ ಕಾನೂನಿನ ಹಕ್ಕನ್ನು ಯಾವ ಅಧಿಕಾರಿಯೂ ಬಿಟ್ಟುಕೊಡುವುದಕ್ಕೆ ಒಪ್ಪುವುದಿಲ್ಲವೆಂದು ತಿಳಿಸಿದ್ದೇನೆ. ಮತ್ತೆ ಈ ರೀತಿ ಈ ಕಾರಣಕ್ಕಾಗಿ ಈ ರೀತಿ ಮಾಡುವಂಥದ್ದು ಸರಿಯಾಗಿ ಕಾಣುವುದಿಲ್ಲವೆಂದೂ ಅವರಿಗೆ ನಾನು ತಿಳಿಸಿದ್ದೇನೆ. ಈ ವಿಷಯದ ಇಳಿಸಿ ಬಗ್ಗೆ ಆಶ್ವಾಸನೆಯನ್ನು ಕೊಡಿ ಎಂಬುದಾಗಿ ಹೇಳಿದರಂ, ಅದಕ್ಕೂ ನಾನು ಒಪ್ಪಲಿಲ್ಲ. ಅವರಂ